**Code No.: BFL-02**

Total No. of Questions : 12 Total No. of Printed Pages : 4

# ಸ್ನಾತಕ ಪರೀಕ್ಷೆ – ೨೦೧೫

## ಬಿ.ಎ. – ವಿದ್ವನ್ಮಧ್ಯಮ – ಪ್ರಥಮ ವರ್ಷ

### ವಿಷಯ – ಕನ್ನಡ – II

ದಿನಾಂಕ – 27-3-2015 ಗರಿಷ್ಠ ಅಂಕ – ೧೦೦

ಸಮಯ – 10.00 A.M. to 1.00 P.M. Max. Marks – 100

---

**I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ : 10 × 1 = 10**

1. ಗುಣಾವಗುಣ ಶಬ್ದವು ___________ ಸಂಧಿಗೆ ಉದಾಹರಣೆಯಾಗಿದೆ.
   (ಎ) ಲೋಪಸಂಧಿ (ಬಿ) ಗುಣಸಂಧಿ
   (ಸಿ) ಸವರ್ಣದೀರ್ಘಸಂಧಿ (ಡಿ) ಆಗಮಸಂಧಿ

2. ಕಾರ್ಯಪದದ ತದ್ಭವ ರೂಪ
   (ಎ) ಕಾರಿಯ (ಬಿ) ಕಜ್ಜ
   (ಸಿ) ಕಬ್ಬ (ಡಿ) ಕಾರಯ

3. ಅತ್ಯುಕ್ತಿ ಪದವನ್ನು ಬಿಡಿಸಿ ಬರೆದರೆ
   (ಎ) ಅತಿ + ಉಕ್ತಿ (ಬಿ) ಅತ್ಯು + ಉಕ್ತಿ
   (ಸಿ) ಅತು + ಉಕ್ತಿ (ಡಿ) ಅತಿ + ಉಕುತಿ

4. ತೂರ್ಯ ಪದದ ಅರ್ಥ
   (ಎ) ತುತ್ತೂರಿ (ಬಿ) ಹತ್ತಿರ
   (ಸಿ) ಆತುರ (ಡಿ) ಕಾತರ

5. ಇವುಗಳಲ್ಲಿ ದ್ವಿರುಕ್ತಿಯನ್ನು ಗುರುತಿಸಿ.
   (ಎ) ಸರಸರ (ಬಿ) ಫಳಫಳ
   (ಸಿ) ತಂಡತಂಡ (ಡಿ) ಧಗಧಗ

6. ದುರ್ಗುಣ ಪದದ ವಿರುದ್ಧ ಶಬ್ದ
   (ಎ) ಅವಗುಣ (ಬಿ) ನಿರ್ಗುಣ
   (ಸಿ) ವಿಗುಣ (ಡಿ) ಸದ್ಗುಣ

7. ಜಾಬಾಲಿ ಋಷಿಯ ಮಗ
   (ಎ) ಹಾರೀತ (ಬಿ) ಕಪಿಂಜಲ
   (ಸಿ) ಇಂದ್ರಾಯುಧ (ಡಿ) ಕೇಯೂರಕ

8. ಮೈಸೂರಿನಲ್ಲಿ ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ
   (ಎ) ಪ್ರಥಮಾ ವಿಭಕ್ತಿ (ಬಿ) ತೃತೀಯಾ
   (ಸಿ) ಸಪ್ತಮೀ (ಡಿ) ಷಷ್ಠೀ

9. ನೆಗಡಿಯಾದಾಗ ಬರುವ ಗೊರಕೆಯ ಶಬ್ದವನ್ನು ಲೇಖಕರು ಇದಕ್ಕೆ ಹೋಲಿಸಿದ್ದಾರೆ.

| | |
|---|---|
| (ಎ) ರೈಲಿನ ಸಿಳ್ಳೆ | (ಬಿ) ಘಟ್ಟವೇರುವ ಬಸ್ಸು |
| (ಸಿ) ಜಲಪಾತದ ಅಬ್ಬರ | (ಡಿ) ಬೀಪ್ ಬೀಪ್ |

10. ಕಾದಂಬರಿಯ ತಂದೆಯ ಹೆಸರು

| | |
|---|---|
| (ಎ) ಚಿತ್ರರಥ | (ಬಿ) ತಾರಾಪೀಡ |
| (ಸಿ) ಶುಕನಾಸ | (ಡಿ) ಹಂಸ |

**II. ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ : 5 × 1 = 5**

1. ಕಷ್ಟ ಬೇಡೆಂಬಾಸೆ ___________ ಕಾಂಬಾಸೆ.
2. ಉದಕದೊಳಗಣ ___________.
3. ಪುಂಡರೀಕನ ತಂದೆ ___________ ಮಹರ್ಷಿ.
4. ಕನಕದಾಸರ ಅಂಕಿತ ___________.
5. ಪುಂಡರೀಕನು ಮಹಾಶ್ವೇತೆಯ ಕಿವಿಗೆ ___________ ಹೂವಿನ ಮಂಜರಿಯನ್ನು ಸಿಕ್ಕಿಸಿದ.

**III. ಆವರಣದಲ್ಲಿ ಸೂಚಿಸಿರುವಂತೆ ಬರೆಯಿರಿ : 5 × 1 = 5**

1. ಸೊಳ್ಳೆಗಳು ಮನುಷ್ಯನಿಗೆ ಅಷ್ಟೊಂದು ತೊಂದರೆ ಕೊಡುವುದಿಲ್ಲ.
   (ಗೆರೆ ಎಳೆದ ಪದದ ವಿಭಕ್ತಿ ಪ್ರತ್ಯಯ ಗುರುತಿಸಿ)
2. ನಾ ಹರಿಯೇ ಮರೆತೆನೋ ನಿನ್ನ ಅಸುರಾರಿ.
   (ಮೇಲಿನ ವಾಕ್ಯವನ್ನು ಸರಿಯಾದ ಅನುಕ್ರಮದಲ್ಲಿ ಜೋಡಿಸಿ ಬರೆಯಿರಿ)
3. ಅವರು ಮೈಸೂರು ರುಮಾಲನ್ನು ಕಟ್ಟುವರು.
   (ಈ ವಾಕ್ಯವನ್ನು ಭೂತ ಕಾಲಕ್ಕೆ ಪರಿವರ್ತಿಸಿ)
4. ಗೊರಕೆಯ ಧ್ವನಿ ತಾಳ ಮೇಳವಿಲ್ಲದ ಸಂಗೀತ.
   (ಈ ವಾಕ್ಯದಲ್ಲಿರುವ ಜೋಡಿ ಪದವನ್ನು ಗುರುತಿಸಿ ಬರೆಯಿರಿ)
5. ಅಚ್ಚರಿಗಣ್ಣು
   (ಈ ಪದದ ಸಂಧಿ ಗುರುತಿಸಿ ಬರೆಯಿರಿ)

**IV. ಹೊಂದಿಸಿ ಬರೆಯಿರಿ : 5 × 1 = 5**

| | **ಅ** | **ಆ** |
|---|---|---|
| 1. | ಗುಹೇಶ್ವರ | ಅನನುಭವ |
| 2. | ಮೈಸೂರು ಮಲ್ಲಿಗೆ | ಮೇಲು ಕೋಟೆ |
| 3. | ಅನುಭವ | ಕರ್ನಾಟಕ ಸಂಗೀತ ಪಿತಾಮಹ |
| 4. | ಮೃತ್ಯು | ಅಲ್ಲಮಪ್ರಭು |
| 5. | ಪುರಂದರದಾಸರು | ಮಿತ್ತು |
| | | ಕೆ.ಎಸ್. ನರಸಿಂಹಸ್ವಾಮಿ |

**Code No.: BFL-02**

**V. ಗದ್ಯಭಾಗ ಓದಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ : 5 × 1 = 5**

ಪ್ರಾಚೀನ ಭಾರತದ ಇತಿಹಾಸದಲ್ಲಿ ಚಂದ್ರಗುಪ್ತ ಮೌರ್ಯ ಮತ್ತು ಅಶೋಕ ಇವರಿಬ್ಬರನ್ನು ಬಿಟ್ಟರೆ ಹರ್ಷನ ವಿಚಾರವೇ ನಮಗೆ ಖಚಿತವಾಗಿಯೂ, ವಿಸ್ತಾರವಾಗಿಯೂ ತಿಳಿದಿರುವುದು. ಇದಕ್ಕೆ ಆಧಾರಗಳು ಮುಖ್ಯವಾಗಿ ಮೂರು – ಬಾಣನ ಹರ್ಷ ಚರಿತ, ಹೂಯೆನ್ಸಾಂಗನ ಹೇಳಿಕೆ, ಆ ಕಾಲದ ಶಾಸನಗಳು. ಹರ್ಷ ಅಥವಾ ಶ್ರೀ ಹರ್ಷನು ಕ್ರಿ.ಶ. 590ರಲ್ಲಿ ಹುಟ್ಟಿದನು. ಪ್ರಭಾಕರ ವರ್ಧನ ಮತ್ತು ಯಶೋಮತಿ ಅವನ ತಂದೆ, ತಾಯಿ ಹರ್ಷನಿಗೆ ರಾಜ್ಯವರ್ಧನನೆಂಬ ಅಣ್ಣ, ರಾಜ್ಯಶ್ರೀ ಎಂಬ ತಂಗಿ ಇದ್ದರು. ಅಣ್ಣ ಸ್ವಲ್ಪ ಕಾಲ ರಾಜ್ಯವಾಳಿ ಶತ್ರುಗಳಿಂದ ಹತನಾದ ಮೇಲೆ, ಹರ್ಷನು ಪಟ್ಟಕ್ಕೆ ಬಂದನು.

ಈತ ರಾಜ್ಯವಾಳಿದ ಸುಮಾರು ನಲವತ್ತು ವರ್ಷ ಕಾಲ, ದೇಶ ಶಾಂತಿ ಸುಭಿಕ್ಷಗಳ ನೆಲೆಯಾಗಿತ್ತು. ಈತನು ತೋರಿದ ಆಸಕ್ತಿಯಿಂದಾಗಿ ಧರ್ಮ, ಕಲೆ, ಸಾಹಿತ್ಯ ಶಾಸ್ತ್ರಗಳು ಅಭಿವೃದ್ಧಿ ಹೊಂದಿದವು. ಬಾಣ, ಭರ್ತೃಹರಿ, ಭಾರವಿ ಮೊದಲಾದ ಕವಿಗಳು ಈ ಕಾಲದಲ್ಲಿಯೇ ಜೀವಿಸಿದ್ದರು. ಹರ್ಷನು ರಾಜನಾಗಿದ್ದಂತೆ, ಕವಿಯೂ ಆಗಿದ್ದನು. ಈತ ಪ್ರಿಯದರ್ಶಿಕಾ, ರತ್ನಾವಳಿ, ನಾಗಾನಂದ ಎಂಬ ನಾಟಕಗಳನ್ನು ರಚಿಸಿದ್ದಾನೆ. ಇದಲ್ಲದೆ ಅವನು ವ್ಯಾಕರಣವನ್ನು ಬರೆದಿರುವನೆಂದು ಹೇಳಿದೆ ಇದೆ.

ಪ್ರಶ್ನೆಗಳು :

(1) ಹರ್ಷನ ಬಗ್ಗೆ ದೊರೆತಿರುವ ವಿವರಗಳಿಗೆ ಆಧಾರಗಳು ಯಾವುವು?

(2) ಹರ್ಷನ ತಾಯಿ ತಂದೆಯರ ಹೆಸರು, ಸೋದರ ಸೋದರಿಯರ ಹೆಸರುಗಳನ್ನು ತಿಳಿಸಿ.

(3) ಹರ್ಷ ರಚಿಸಿದ ನಾಟಕಗಳನ್ನು ಹೆಸರಿಸಿ.

(4) ಹರ್ಷನ ಆಳ್ವಿಕೆ ಹೇಗಿತ್ತು?

(5) ಹರ್ಷನ ಸಮಕಾಲೀನರಾದ ಕವಿಗಳು ಯಾರು ಯಾರು?

**VI. ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ : 10 × 1 = 10**

1. ಗೊರಕೆಯನ್ನು ಕುರಿತು ಕವಿ ಪಂಪ ಏನು ಹೇಳಿದ್ದಾನೆ?
2. ಲೇಖಕರು ತಮ್ಮ ಮೊದಲ ಸಂಬಳವನ್ನು ಹೇಗೆ ವಿನಿಯೋಗಿಸಬೇಕೆಂದಿದ್ದರು?
3. ಜಗತ್ತು ಯಾವುದರಿಂದ ತುಂಬಿ ತುಳುಕುತ್ತಿದೆ?
4. ದಾಸರು ಬಿನ್ನಹಕೆ ಬಾಯಿಲ್ಲವೆಂದಿದ್ದಾರೆ ಏಕೆ?
5. ಅಕ್ಕ, ಯಾವುದು ಸುಖವೆಂದಿದ್ದಾಳೆ?
6. ವೀ.ಸಿ. ಅವರು ಯಾವುದನ್ನು ಅಸಾಧ್ಯವೆಂದಿದ್ದಾರೆ?
7. ಕವಿ ಯಾವುದು ಸೀತೆಗಾದ ಅನ್ಯಾಯವೆಂದಿದ್ದಾರೆ?
8. ಕುವೆಂಪು ಅವರು ಸಂಸ್ಕೃತವನ್ನು ಯಾವುದಕ್ಕೆ ಹೋಲಿಸಿದ್ದಾರೆ? ಅದು ಹೇಗೆ ಬೆಳೆದು ನಿಂತಿದೆ?
9. ಮೈಸೂರು ರುಮಾಲಿಗೆ ಯಾವುದರೊಂದಿಗೆ ಹೊಂದಿಕೆಯಾಗುವುದಿಲ್ಲ?
10. ವೈಶಂಪಾಯನ ಗಿಳಿಯು ಯಾವ ಮರದಲ್ಲಿ ವಾಸಿಸುತ್ತಿತ್ತು?

**VII. ಈ ಕೆಳಗಿನ ಪ್ರಶ್ನೆಗಳಿಗೆ 2-3 ವಾಕ್ಯಗಳಲ್ಲಿ ಉತ್ತರಿಸಿರಿ : 10 × 2 = 20**

1. ಲೇಖಕರ ಪ್ರಕಾರ ಯಾವ ಯಾವ ರುಮಾಲುಗಳನ್ನು ಕಟ್ಟಬಹುದು?
2. ಲೇಖಕರ ಪತ್ನಿ ಲಲಿತೆ ಏನೆಂದು ಹರಕೆ ಹೊತ್ತಿದ್ದಳು?
3. ಲೇಖಕರಾದ ಅ.ರಾ. ಮಿತ್ರ ಗೊರಕೆಯ ಸುಖವನ್ನು ಎಲ್ಲೆಲ್ಲಿ ಅನುಭವಿಸಿದ್ದಾರೆ?
4. ದಾಸರು ಹೆಸರಿಸಿರುವ ಮದಗಳಾವುವು?

5. ಸಂಸ್ಕೃತ ಮಾತೆಯ ಕೃಪೆಯಿಂದ ಯಾರು ಅಮೃತರಾಗಿದ್ದಾರೆ?
6. ಸೀತೆಯ ಅಗ್ನಿ ಪರೀಕ್ಷೆಯ ಬಗ್ಗೆ ಕವಿಯ ಅಭಿಪ್ರಾಯವೇನು?
7. ವಚನ ಚಳುವಳಿಯ ಪ್ರಮುಖ ವಚನಕಾರರನ್ನು ಅವರ ಅಂಕಿತಗಳನ್ನು ತಿಳಿಸಿ.
8. ಕರಿರಾಜನಿಗೆ ಒದಗಿದ ಕಷ್ಟ ಯಾವುದು?
9. ವೈಶಂಪಾಯನ ಗಿಳಿಯನ್ನು ಆದರ ತಂದೆ ಹೇಗೆ ಸಾಕಿತು?
10. ಚಂದ್ರಾಪೀಡನ ವಿದ್ಯಾಭ್ಯಾಸದ ವಿವರ ತಿಳಿಸಿ.

**VIII. ಇವುಗಳಲ್ಲಿ ಮೂರು ವಾಕ್ಯಗಳ ಸಂದರ್ಭ ತಿಳಿಸಿ : 3 × 3 = 9**

1. ಕೇಳಿನೋ ಹರಿ ತಾಳಿನೋ ಎಂದು ಗೊಣಗಿ ಕಿವಿ ಮುಚ್ಚಿಕೊಳ್ಳುತ್ತಾರೆ.
2. ಸಮಯಾ ಸಮಯ ವುಂಟೆ ಭಕ್ತ ವತ್ಸಲ ನಿನಗೆ
3. ನನ್ನಂಥ ನಿರ್ದಯನೂ ನಿಷ್ಠುರನೂ, ಕೃತಘ್ನನೂ, ತಂದೆಗೆ ಮರುಗದವನೂ ಲೋಕದೊಳಗುಂಟೆ!
4. ಇವಳು ದೇವಕನ್ನಿಕೆ ಇರಬಹುದಾಗಿ ತೋರುತ್ತಾಳೆ ಮರ್ತ್ಯಲೋಕದವರಿಗೆ ಇಂಥಾ ಗಾಯನವೆಲ್ಲಿಯದು.

**IX. ಇಬ್ಬರು ಲೇಖಕ/ಕವಿಗಳ ಕಾಲ, ಸ್ಥಳ, ಕೃತಿಗಳನ್ನು ತಿಳಿಸಿ : 2 × 3 = 6**

(1) ಕುವೆಂಪು
(2) ಎ.ಎನ್. ಮೂರ್ತಿರಾವ್
(3) ಅಕ್ಕಮಹಾದೇವಿ

**X. ಈ ಪ್ರಶ್ನೆಗಳಿಗೆ 6-8 ವಾಕ್ಯಗಳಲ್ಲಿ ಉತ್ತರಿಸಿರಿ. (3 ಪ್ರಶ್ನೆಗಳಿಗೆ ಮಾತ್ರ) : 3 × 4 = 12**

1. ಮೈಸೂರು ರುಮಾಲಿನಿಂದ ಸಿಗುವ ಗೌರವ, ಮರ್ಯಾದೆಗಳ ಬಗೆಗೆ ಲೇಖಕರ ಅಭಿಪ್ರಾಯಗಳ ಸಂಗ್ರಹಿಸಿರಿ.
2. ಲೇಖಕರು ಗೊರಕೆಯನ್ನು ರೈಲಿಗೆ ಹೇಗೆ ಹೋಲಿಸಿದ್ದಾರೆ?
3. ಶ್ರೀಹರಿಯು ತನ್ನ ಭಕ್ತರ ಸಂಕಷ್ಟಗಳಿಗೆ ಹೇಗೆ ಒದಗಿ ಬಂದಿದ್ದಾನೆ ಉದಾಹರಣೆ ಸಹಿತ ವಿವರಿಸಿ.
4. ಅಚ್ಛೋದ ಸರೋವರದ ಚೆಲುವನ್ನು ವರ್ಣಿಸಿರಿ.

**XI. ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ : 1 × 3 = 3**

1. ಬೆಳ್ಳಗಿರುವುದೆಲ್ಲ ಹಾಲಲ್ಲ.
2. ಮನಸ್ಸಿದ್ದರೆ ಮಾರ್ಗವಿದೆ.

**XII. ಪತ್ರ/ಪ್ರಬಂಧ ಬರೆಯಿರಿ : 1 × 10 = 10**

ನಿಮ್ಮನ್ನು ನೀವು, ಆಬಚೂರಿನ ಆಶಾ/ಅರುಣ್ ಎಂದು ಭಾವಿಸಿ ನಿಮ್ಮ ಊರಿನಲ್ಲಿ $H_1N_1$ ರೋಗ ಹರಡದಂತೆ ಸೂಕ್ತ ಕ್ರಮ ಕೈಗೊಳ್ಳುವಂತೆ ಆರೋಗ್ಯ ಸಚಿವರಿಗೆ ಪತ್ರ ಬರೆಯಿರಿ.

ಅಥವಾ

ನಿತ್ಯ ಜೀವನದಲ್ಲಿ ಯೋಗಾಭ್ಯಾಸದ ಅವಶ್ಯಕತೆಯನ್ನು ವಿವರಿಸಿ 10-12 ವಾಕ್ಯಗಳಲ್ಲಿ ಪ್ರಬಂಧ ರಚಿಸಿರಿ.

---